**ಸಾಕ್ಷಿಗೆ ದಿನಾಂಕಃ08-12-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.BSNM ವಕೀಲರಿಂದ ::**

ದಾವಾ ಸರ್ವೇ ನಂಬರ್ ನ ಒಟ್ಟು ವಿಸ್ತೀರ್ಣ 7 ಎಕರೆ 38 ಗುಂಟೆ ಆಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ಆದ ವಿಭಾಗದ ಅನ್ವಯ ಎಲ್ಲಾ ಹಿಸ್ಸೆದಾರರು ಹಿಂದೆ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಸದರಿ ವಿಭಾಗದ ಸಮಯದಲ್ಲಿ ಆದ ಪತ್ರದ ಅನ್ವಯವೇ ಅಳತೆ ಸಹ ಮಾಡಬೇಕು ಎಂದರೆ ಸರಿ. ನಾನು ದಾವಾ ಶೆಡ್ಯೂಲ್ ಸ್ವತ್ತನ್ನು ಅಳತೆ ಮಾಡಿಸುವ ಸಮಯದಲ್ಲಿ ಪ್ರತಿವಾದಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿಯವರು ಸ್ಥಳದಲ್ಲಿ ಇದ್ದರೂ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಹದ್ದುಬಸ್ತುಗೆ ಸಂಬಂಧಪಟ್ಟ ನೋಟೀಸ್ ಹಾಜರುಪಡಿಸಿರುತ್ತೇನೆ. ನಾನು ಸರ್ವೇ ಅಧಿಕಾರಿಗಳ ಜೊತೆ ಶಾಮಿಲಾಗಿ ಸುಳ್ಳು ನಕ್ಷೆ ತಯಾರಿಸಿ ಪ್ರತಿವಾದಿಯು ನನ್ನ ಜಾಗವು ಒತ್ತುವರಿ ಮಡಿರುವುದಾಗಿ ಈ ಸುಳ್ಳು ದಾವೆಯನ್ನು ಅದರ ಆಧಾರದಲ್ಲಿ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಸರ್ವೇ ಸಮಯದಲ್ಲಿ ಪ್ರತಿವಾದಿ ಸ್ಥಳದಲ್ಲಿ ಹಾಜರಿಲ್ಲದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು 1998 ರ ವಿಭಾಗ ಪತ್ರದ ಅನ್ವಯ ಅವರ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಯಾವುದೇ ಜಾಗವನ್ನು ಒತ್ತುವರಿ ಮಾಡದಿದ್ದರೂ ಸುಳ್ಳು ದಾವೆಯನ್ನು ಹೂಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮಾಡಿಸಿರುವ ಹದ್ದುಬಸ್ತುನ್ನು DDLR ರವರ ಸಮಕ್ಷಮ ಪ್ರತಿವಾದಿಯ ಪ್ರಶ್ನಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನಗೆ ನೋಟೀಸ್ ಜಾರಿಯಾಗಿದ್ದು ನಾನು ಸದರಿ ಪ್ರಕರಣದಲ್ಲಿ ಹಾಜರಾಗಿರುತ್ತೇನೆ ಎಂದರೆ ಸರಿ. ಧರ್ಮವೀರ್ ರವರು ನನ್ನ ಜಾಗವನ್ನು ಒತ್ತುವರಿ ಮಾಡಿರುವುದಿಲ್ಲ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಇಲ್ಲದಿದ್ದರೂ ಪ್ರತಿವಾದಿಯ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ಕಾರಣಕ್ಕೆ ದಾವಾ ಶೆಡ್ಯೂಲ್

ಸ್ವತ್ತಿಗೆ ಸಂಬಂಧಪಟ್ಟಂತೆ ಮೂಲ ದಾಖಲೆಯನ್ನು ಇಲ್ಲಿಯವರೆಗೂ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ಈ ದಾವೆಯಲ್ಲಿ ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: